**ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ  MVC-443/2023**

**ದಿನಾಂಕ 21-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಪ್ರದೀಪ ಕೆ.ಎಸ್. | RW1 |
| ತಂದೆಯ ಹೆಸರು | ಃ | ಶಿವನಂಜಪ್ಪ | |
| ವಯಸ್ಸು | ಃ | 42 ವರ್ಷ | |
| ಉದ್ಯೋಗ | ಃ | ಅಸಿಸ್ಟಂಟ್ ಮ್ಯಾನೇಜರ್ | |
| ವಾಸಸ್ಥಳ | ಃ | ಬೆಂಗಳೂರು | |

**ಮುಖ್ಯ ವಿಚಾರಣೆಃ ಶ್ರೀ VCMP 2ನೇ ಎದುರುದಾರರ ಪರ ವಕೀಲರಿಂದಃ**

ಮುಖ್ಯ ವಿಚಾರಣೆ ಬದಲಾಗಿ ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

2ನೇ ಎದುರುದಾರರ ಕಂಪನಿಯವರು ನನಗೆ ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್.1 ಎಂದು ಗುರುತಿಸಲಾಯಿತು.

ನಮ್ಮ ಕಂಪನಿ ವತಿಯಿಂದ ಕೆ.ಎ-33 ವಿ-4020 ರ ವಾಹನಕ್ಕೆ ನೀಡಲಾದ ವಿಮೆ ಪಾಲಿಸಿ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್-2 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಶ್ರೀ ಎಸ್.ಎ.ಕೆ. ಅರ್ಜಿದಾರರ ಪರ ವಕೀಲರಿಂದ**

31-10-2022 ರಂದು ನಿಶಾನೆ ಆರ್-2 ಪಾಲಿಸಿ ಅಸ್ತಿತ್ವದಲ್ಲಿತ್ತು ಎಂದರೆ ನಿಜ. ವಾಹನ ನಂ.ಕೆಎ-33 ವಿ-4020ರ ಚಾಲಕನ ಮೇಲೆ ಭೀಮರಾಯಗುಡಿ ಪೊಲೀಸರು ಗು.ನಂ.86/2022 ರಲ್ಲಿ FIR ಹಾಗೂ ದೋಷಾರೋಪಣೆ ಪಟ್ಟಿಯನ್ನು ಸಹ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಅದು ತಪ್ಪಾಗಿ ಹಾಕಿರುತ್ತಾರೆಂದು ನುಡಿಯುತ್ತಾರೆ. ಸದರಿ ವಾಹನದ ಚಾಲಕನ ಮೇಲೆ FIR ಹಾಗೂ ದೋಷಾರೋಪಣೆ ಪಟ್ಟಿಯನ್ನು ತಪ್ಪಾಗಿ

ಹಾಕಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಪ್ರಕರಣದ ಆರೋಪಿ ಘನ ಹಿರಿಯ ಶ್ರೇಣಿ ನ್ಯಾಯಾಲಯ ಶಹಾಪೂರದಲ್ಲಿನ ಸಿಸಿ ನಂ.565/2022 ರಲ್ಲಿ ತಪ್ಪು ಒಪ್ಪಿಕೊಂಡು ದಂಡ ಪಾವತಿಸಿರುತ್ತಾನೆಂದರೆ ಸಾಕ್ಷಿ ಅರ್ಜಿದಾರರು ಹಾಗೂ ವಾಹನದ ಮಾಲೀ ಶಾಮೀಲಾಗಿ ಚಾಲಕ ತಪ್ಪು ಒಪ್ಪಿಕೊಳ್ಳುವಂತೆ ಮಾಡಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ವಾಹನ ನಂ.ಕೆಎ-33 ವಿ-4020ರ ವಾಹನಕ್ಕೆ ನೀಡಲಾದ ಬಾರಕೊಡ್ ಇರುವ ಪಾಲಿಸಿಯ ಝುರಾಕ್ಸ್ ಪ್ರತಿಯಾಗಿದ್ದು ಅದರ ಮೇಲಿರುವ ಬಾರಕೋಡ್ ಹಾಗೂ ವಿಮೆ ಪಾಲಿಸಿ ನಮ್ಮ ಕಂಪನಿಯದ್ದು ಎಂದು ಒಪ್ಪಿಕೊಂಡಿದ್ದು ಸದರಿ ದಾಖಲಾತಿಯ ಮೂಲ ಪ್ರತಿಯನ್ನು ಹಾಜರುಪಡಿಸುವ ಷರತ್ತಿಗೊಳಪಟ್ಟು ಅದನ್ನು ಅರ್ಜಿದಾರರ ಪರವಾಗಿ ನಿಪಿ-37 ಎಂದು ಗುರುತಿಸಲಾಯಿತು. ನಾನು 2ನೇ ಎದುರುದಾರ ಕಂಪನಿಯ ಸಿಬ್ಬಂದಿಯಾದ ಕಾರಣ ಕಂಪನಿ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿದಂತಹ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**1ನೇ ಎದುರುದಾರ ಹಾಗೂ 1ನೇ ಎದುರುದಾರರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು
ಜೇವರ್ಗಿ